ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
Karnataka State Rural Development and Panchayat Raj University
ರೈತ ಭವನ, ಜನರಲ್‌ಕಾರಿಯಪ್ಪ ವೃತ್ತ, ಗದಗ– 582 101
Raitha Bhavana, General Cariappa Circle, Gadag – 582 101
E-mail: ksrdpru@gmail.com Phone: 08372-230338, Fax: 08372-297343

**Proceedings of the 8th meeting of the Executive Council held on 24-12-2021 at 11.00am Through Zoom Online meeting**

**Members Present:**

| | | |
|---|---|---|
| 1. | **Prof. Vishnukant S. Chatpalli**<br>Vice-Chancellor, KSRDPRU | **Chairperson** |
| 2. | **Prof. T. V. Kattimani**<br>Vice-Chancellor,<br>Central tribal University of Andrapradesh,<br>Vizinagaram, Andhra Pradesh | **Member** |
| 3. | **Sri Abdul Hakim**<br>Social Worker, Educationalist and Writer<br>Gayatrinagar, Benagluru. | **Member** |
| 4. | **Dr. N. Sivanna**<br>Director I/C, Centre for Research, Innovation and Evaluation, KSRDPRU. | **Member** |
| 5. | **Prof. R. S. Deshpande**<br>Former Director, ISEC, Nagarabhavi, Bengaluru. | **Member** |
| 6. | **Dr. Arun R. Patil**<br>Adhiti, Adyapakaranagara, Hulkoti. | **Member** |
| 7. | **Dr. Prakash Bhat**<br>Former CEO, SCOPE, Dharwad. | **Member** |
| 8. | **Sri B. G. Govindappa**<br>Ex-MLA, Belaguru Village,<br>Srirampura Hobli, Hosadurga. | **Member** |
| 9. | **Dr. Parimala S. Maroor,**<br>Project Director, NHM/RCH,<br>On behalf of The Principal Secretary,<br>Health Department, Govt. of Karnataka, Bengaluru. | **Member** |
| 10. | **Prof. Basavaraj L. Lakkannavar,**<br>Registrar, KSRDPRU, Gadag. | **Member Secretary** |

**Leave of Absence:**

| | | |
|---|---|---|
| 11. | **The Vice-Chancellor**, VTU, Belgaum. | **Member** |
| 12. | **Smt. N. Jamuna Urs**<br>Home Scientist (Retd.), JSS KVK, Mysuru. | **Member** |
| 13. | **Sri G. B. Shivaraju**<br>Vice-President, Gandhi Bhavan, Bengaluru. | **Member** |
| 14. | **The Vice-Chancellor,** UAS, GKVK, Bengaluru. | **Member** |
| 15. | **Prof. K. M. Hanumantharayappa**<br>Retd. Professor, Department of Law,<br>Bengaluru University, Bengaluru. | **Member** |
| 16. | **The Principal Secretary,**<br>Rural Development and Panchayat Raj Department,<br>Govt. of Karnataka, Bengaluru. | **Member** |

17. **The Principal Secretary,** **Member**
Department of Agriculture, Govt. of Karnataka, Bengaluru.
18. **The Principal Secretary,** **Member**
Labour Department, Govt. of Karnataka, Bengaluru.
19. **The Principal Secretary,** **Member**
Social Welfare Department, Govt. of Karnataka, Bengaluru.

At the outset, Registrar welcomed all the dignitaries present in the meeting. He deliberated the decisions taken and suggestions received in the Academic Council meeting and requested the Hon'ble Vice-Chancellor to preside over the meeting.

Hon'ble Vice Chancellor, the Chairperson of the Executive Council thanked the Registrar and welcomed all the members present and requested Dr. Abdul Aziz Mulla, Assistant Director, CTPS to facilitate the inauguration of Table Calendar designed and printed by CTPS, KSRDPR University. Dr. Abdul Aziz Mulla explaining about the activities conducted by CTPS from past 3 months thanked Hon'ble Vice Chancellor and Registrar for boosting the morale of the staff and students in taking up the training and extension activities through CTPS and with permission of all the Executive Council Members the Table Calendar 2022 was inaugurated.

Later Hon'ble Vice Chancellor presented in detail major developments of the past 3 months in the University. Important points are as under:

- Total Students strength of both U.G. and P.G. is around 600 (excluding M.B.A. – as KEA Counselling is pending).
- Engaging 9 new additional Guest Faculties and 2 Project Fellows for better teaching learning process.
- Involvement of the Students of M.S.W., M.P.H. and F.S.T. Programmes in the Baseline Study during impact assessment of providing supplementary nutrition in MDMS (Mid-Day Meal Scheme) in Yadagiri and Gadag District.
- Participation of Students and Faculty in India International Science Festival 2021 from 10th to 13th December, 2021, held in Goa. Products developed in the University like Cough Syrup, Millett Cookies were displayed in the festival, which received a good response.
- Work on "Jillegondu Goshale" Programme in the University being taken up with 50% of the capital cost by the University and 50% funded by Department of Animal Husbandry, GOK.
- Preparatory work like Course structure and Syllabus for Computer training of Librarians in the Grama Panchayat has been completed.

Prof R.S.Deshpande opined that there was a good progress in the activities being taken up, Shri Arun Patil and Shri Abdul Hakim complimented the good work being carried out.

Later agenda was taken up for discussion.

**ವಿಷಯ ಸಂಖ್ಯೆ 1: ದಿನಾಂಕ 23-07-2021 ರಂದು ಜರುಗಿದ 7ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳು ಹಾಗೂ ದಿನಾಂಕ 28-09-2021 ಮತ್ತು 08-10-2021 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.**

ಪರಾಮರ್ಶನಟಿಪ್ಪಣಿ:-

ದಿನಾಂಕ 23-07-2021 ರಂದು ಜರುಗಿದ 7ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳು ಹಾಗೂ ದಿನಾಂಕ 28-09-2021 ಮತ್ತು 08-10-2021 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿಕೊಡಲಾಗಿದೆ. ಸದರಿ ನಡವಳಿಗಳಿಗೆ ಸದಸ್ಯರಿಂದ ಆಕ್ಷೇಪಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ನಡಾವಳಿಗಳು ಸ್ಥಿರೀಕರಣಗೊಂಡಂತಾಗಿವೆ. (ನಡವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ).

*ನಿರ್ಣಯ*

*ಅನುಮೋದಿಸಲಾಯಿತು.*

**ವಿಷಯ ಸಂಖ್ಯೆ 2: ದಿನಾಂಕ 23-07-2021 ರಂದು ಜರುಗಿದ 7ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆ ಹಾಗೂ ದಿನಾಂಕ 28-09-2021 ಮತ್ತು 08-10-2021 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗನುಸಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಪರಿಗಣಿಸುವ ಬಗ್ಗೆ.**

ಪರಾಮರ್ಶನಟಿಪ್ಪಣಿ:-

ದಿನಾಂಕ 23-07-2021 ರಂದು ಜರುಗಿದ 7ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆ ಹಾಗೂ ದಿನಾಂಕ 28-09-2021 ಮತ್ತು 08-10-2021 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗನುಸಾರ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿಗಾಗಿ ಮಂಡಿಸಲಾಗಿದೆ. (ಅನುಸರಣಾ ವರದಿಯ ಪ್ರತಿಯನ್ನು ಲಗತ್ತಿಸಲಾಗಿದೆ).

*ನಿರ್ಣಯ*

*ಮಾನ್ಯ ಕುಲಸಚಿವರು ದಿನಾಂಕ 23-07-2021 ರಂದು ಜರುಗಿದ 7ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆ ಹಾಗೂ ದಿನಾಂಕ 28-09-2021 ಮತ್ತು 08-10-2021 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗನುಸಾರ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಸವಿಸ್ತಾರವಾಗಿ ವಿವರಿಸಿದರು. ದಿನಾಂಕ 23-07-2021 ರ 7ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳಲ್ಲಿ ಕಾರಣಾಂತರದಿಂದ ವಿಶ್ವವಿದ್ಯಾಲಯದ ನೂತನ ಆವರಣಕ್ಕೆ ಶಿರೋನಾಮ ನೀಡುವುದು ಹಾಗೂ ವಿಶ್ವವಿದ್ಯಾಲಯಕ್ಕೆ ಒಂದು ಧ್ಯೇಯ ಗೀತೆಯನ್ನು ಸಿದ್ಧಪಡಿಸುವ ವಿಷಯಗಳಲ್ಲಿ ವಿಳಂಬವಾಗಿದ್ದು, ಇದರ ಅನುಷ್ಠಾನಕ್ಕಾಗಿ ಇನ್ನೂ ಸ್ವಲ್ಪ ಸಮಯವನ್ನು ನೀಡಬೇಕೆಂದು ಸಭೆಯನ್ನು ಕೋರಿದರು. ಇದಕ್ಕೆ ಉತ್ತರವಾಗಿ ಮಾನ್ಯ ಕುಲಪತಿಗಳು, ಸದರಿ ವಿಷಯವನ್ನು ಇನ್ನೂ ಹೆಚ್ಚು ಸಮಾಲೋಚಿಸಿ ಅನುಷ್ಠಾನಗೊಳಿಸಲಾಗುವುದೆಂದು ತಿಳಿಸಿದರು. ನಂತರ ಸಭೆಯಲ್ಲಿ ಸದಸ್ಯರು ಆಕ್ಷೇಪಣೆ ಇಲ್ಲದೇ ಸದರಿ ಅನುಸರಣಾ ವರದಿಯ ಕುರಿತಾದ ವಿಷಯವನ್ನು ಅನುಮೋದಿಸಿದರು.*

**ವಿಷಯ ಸಂಖ್ಯೆ 3: ದಿನಾಂಕ 02-12-2021 ರಂದು online virtual meeting mode ನಲ್ಲಿ ಜರುಗಿದ ಹಣಕಾಸು ಸಮಿತಿ (Finance Committee) ಸಭೆಯ ನಡವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

ಪರಾಮರ್ಶನಟಿಪ್ಪಣಿ:-

ದಿನಾಂಕ 02-12-2021 ರಂದು ಅಪರಾಹ್ನ 03.00 ಗಂಟೆಗೆ **online virtual meeting mode** ನಲ್ಲಿ ಜರುಗಿದ ಹಣಕಾಸು ಸಮಿತಿ **(Finance Committee)** ಸಭೆಯ ನಡವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. (ನಡವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ).

Scanned with CamScanner

### ನಿರ್ಣಯ

ಮಾನ್ಯ ಹಣಕಾಸು ಅಧಿಕಾರಿಗಳು ದಿನಾಂಕ 02-12-2021 ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ಹಾಗೂ ಸದಸ್ಯರು ನೀಡಿದ್ದ ಸಲಹೆಗಳನ್ನು ಸಭೆಯ ಮುಂದೆ ವಿವರವಾಗಿ ತಿಳಿಸಿದರು. ಮಾನ್ಯ ಕುಲಪತಿಗಳು ಹಣಕಾಸು ಅಧಿಕಾರಿಗಳ ಶ್ರಮ ಮತ್ತು ಕೊಡುಗೆಯನ್ನು ಅಭಿನಂದಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಹಣಕಾಸು ಅಧಿಕಾರಿಗಳ ಹಾಗೂ ವಿಭಾಗದ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸದರಿ ವಿಷಯವನ್ನು ಪರಿಗಣಿಸಿ ಹಣಕಾಸು ಸಮಿತಿ (Finance Committee) ಸಭೆಯ ನಡವಳಿಗಳನ್ನು ಆಕ್ಷೇಪಣೆ ಇಲ್ಲದೆ ಸಭೆಯು ಅನುಮೋದಿಸಿತು.

**Subject No. 4: Conduct of Second Convocation of KSRDPR University proposed to be held during the last week of February 2022 (Tentative) after the consent of the His Excellency the Governor of Karnataka and the Chancellor of the University.**

**<u>Reference Note:</u>**

Karnataka State Rural Development and Panchayat Raj University, Gadag started its academic activities from year 2017-18. The students of the 1st and 2nd batch had been conferred degrees during the 1st Convocation held on 10th April 2021. Third batch has successfully completed their Post Graduate Programmes, about 138 students are eligible for the conferment of degree.

It is proposed to conduct the Second Convocation during the last week of February, 2022 (tentative) after the consent from His Excellency the Governor of Karnataka and the Chancellor of the University. A Convocation Committee has been constituted with vide notification No:RDPRU 37 EXM 2021 dated 8-11-2021 under the Chairmanship of Prof. J.G Nayak (Annexure 1).

In order to conduct the Second Annual Convocation successfully, the Convocation Committee meeting was held on 23.11.2021, Preparatory works regarding the Second Convocation were reviewed by the members and after deliberation suggestions were made accordingly (Annexure 2). University internal committees are formed consisting of University Staff (Annexure 3) for smooth conducting of Second Convocation. The recommendations of Convocation Committee are placed for kind perusal and approval of Academic Council members.

### *RESOLUTION*

*The Hon'ble Vice Chancellor informed the members that there was a breakthrough in the Dress Code designed by the University during 1st Convocation and Officers from Rani Chennamma University and Sri Krishnadevaraya University have visited the University to study the Desi touch adopted in robes. Further it was informed that, in view of the term of Executive Council Members due for expiry in March 1st week, University tentatively decided to conduct 2nd Convocation during the last week of February-2022. To review the schedule of the robes and other procedures that are usually followed to conduct the Convocation, a Convocation Committee under Chairmanship of Prof. J. G. Nayak, former Registrar (Evaluation), RCU, Belagavi, held review meeting and suggested few modifications as below.*

- *The colour strip/ border used in the white Khadi Jacket during first Convocation to be removed as the Jacket can't be used in any other occasions.*
- *Pataga colour to be changed to differentiate the dignitaries.*
- *To remove Jhari work in Green Angavastram of Khadi Material and add Embroidery of University Logo and name.*

Scanned with CamScanner

*Further, the subject was discussed in the Academic Council Meeting held on 18-12-2021 and was approved. Prof. Basavaraj L. Lakkannavar informed that the University had constituted various Committees for successful completion of the 2nd Convocation,.*

*Members considered the subject and appreciated the efforts made in refining the schedule of robes and other materials. Later the Executive Council resolved to approve the matter.*

**Subject No. 5: To recommend / approve the name of the University Nominee for the Expert Scrutiny Committee to be sent to the Governor of Karnataka and Chancellor of the University, for recommending conferment of Honorary degrees.**

**Reference Note:**

According to "Karnataka State Rural Development and Panchayat Raj University Award of Honorary Degrees or Academic Distinctions at the Annual Convocations Regulations, 2019" (Annexure 1), as per clause 3(8), University has to nominate one member amongst the former Vice Chancellors, retired Secretaries of Government of Karnataka or Union of India for the Expert Scrutiny Committee.

Above matter is placed seeking name to be recommended as the University Nominee for the Expert Scrutiny Committee, which would further be forwarded to His Excellency Governor of Karnataka and Chancellor of the University, for constituting the same.

***RESOLUTION***

*Hon'ble Vice Chancellor briefed about the procedure/guidelines to approve the University nominee for Expert Scrutiny Committee and requested the members to suggest the names for the same. He further suggested the name of **Dr. Shivanand Hosamani**, Former Vice Chancellor of Rani Chennamma University, Belgaum, for the same. The members unanimously approved the name suggested by Hon'ble Vice Chancellor.*

*It was resolved to forward the same name to His Excellency, Governor of Karnataka for consideration and for further process.*

**Subject No.6: To suggest the names for Chief Guest to deliver Convocation Address for placing the same before His Excellency the Governor of Karnataka and Chancellor of the University.**

**Reference Note:**

The Academic Council during its Meeting held on 18-12-2021 has suggested the following names for Chief Guest to deliver Convocation Address for placing before His Excellency, The Governor of Karnataka and Chancellor of the University.

| Sl. No. | Name Recommended |
|---|---|
| 1 | **Smt. Reema Nanavathy**, IAS (Retd.),<br>Padma Shri Awardee |
| 2 | **Dr. D. Veerendra Heggade,**<br>Dharmadhikari of the Dharmasthala Temple.<br>Padma Vibhushan Awardee |
| 3 | **Sri Vijayananda**, IAS (Retd.),<br>Former Chief Secretary, Government of Kerala |

Scanned with CamScanner

| | |
|---|---|
| 4 | **Dr.K. Kasturirangan,**<br>Retd. Chairman and Eminent Scientist, ISRO |
| 5 | **Dr. B. M. Hegde,**<br>Padma Vibhushan Awardee |
| 6 | **Dr. W. R. Reddy.** IAS (Retd.),<br>Former DG, NIRD |

The matter is placed for consideration and recommendations of Executive Council.

***RESOLUTION***

*Chairman Dr. Vishnukanth S. Chatpalli, speaking on this, placed 6 names suggested by Academic Council before the Executive Council and requested for the inputs on the same. Replying to this, Prof. R. S. Deshpande said all the names were good and further added that* ***Shri Vijayananda, IAS (Retd.)*** *can be considered either for Chief Guest or for conferring Honorary Doctorate. N.Sivanna seconded Prof R S Deshpande, with respect to considering the name of Shri Vijayanand to be invited as Chief Guest. Prof R S Deshpande further opined that* ***Dr. B. M. Hegde or Dr. D. Veerendra Hegde*** *may be more suitable considering the current situation. Sri Abdul Hakim considering the contributions to the state and country, suggested the name of* ***Sri Santosh Hegde,*** *Retd. Lokayukta.*

*After detailed discussion on the names for Chief Guest to deliver Convocation Address, below 7 names were shortlisted. The same shall be placed before His Excellency, The Governor of Karnataka and Chancellor of Universities for scrutiny.*

1. ***Smt. Reema Nanavathy***
2. ***Dr. D. Veerendra Heggade***
3. ***Sri Vijayananda, IAS (Retd.)***
4. ***Dr. W. R. Reddy, IAS (Retd.),***
5. ***Dr. K. Kasturirangan***
6. ***Dr. B. M. Hegde***
7. ***Sri Santosh Hegde***

**Subject No. 7: To consider, approve and forward the names proposed by the Academic Council to the Expert Scrutiny Committee to confer Honorary Degrees during Second Annual Convocation of KSRDPR University.**

**Reference Note:**

With respect to the "Karnataka State Rural Development and Panchayat Raj University Award of Honorary Degrees or Academic Distinctions at the Annual Convocations Regulations, 2019" (Annexure 1), members of the Academic Council may recommend names for consideration of Honorary Degree or academic distinction, which will be conferred on any person on the ground that he/she is in their opinion by reasons of eminent attainment and position, fit and proper to receive such degree or academic distinction. These recommendations are further placed before Executive Council.

The recommendations of the University for conferring Honorary Degree must be forwarded to the Scrutinizing Committee at least 45 days in advance to the date of Convocation. Further, Scrutiny Committee may recommend not more than three persons in an academic year.

Scanned with CamScanner

**Subject No. 8: To approve the list of candidates eligible to receive degrees during Second Annual Convocation of the University.**

**Reference Note:**

As per the regulation of the University, List of candidates eligible to receive degrees should be approved by Executive Council and later presented to the approval of Academic Council. Details are as follows:

| Sl. No. | Academic Year | No. of Students | Description |
|---|---|---|---|
| 1 | 2020-21 (Third Batch) | 138* | Annexure 1 |

* The Number of Students may vary because the last date for Revaluation is 20.12.2021.

List of candidates eligible to receive degree is submitted for the perusal and approval of Executive Council.

***RESOLUTION***

*The members considered the subject and resolved to approve the matter.*

**Subject No. 9 : To consider and approve the Institutional Ethics Committeein Public Health**

**Reference Note:**

The first Institutional Ethics Committee (IEC) was initially constituted to look into the matters of drafting and reviewing ethical issues regarding the public health related project work/ dissertation for students (mandatory for students as partial fulfillment criteria to complete MPH Programme) or any other research activities. It is proposed to re-constitute Institutional Ethics Committee (IEC) under the guidelines of Indian Council of Medical Research, National Ethics guidelines for Biomedical and Health Research Involving Human Participants, 2017 (Copy placed at Annexure-1).

The IEC Committee has been re-constituted, vide Notification No: RDPRU/ IEC/MPH/1/2021, dated:23.10.2021, (Copy placed at Annexure -2) for a period of 3 years or until further orders, in exercise of powers vested under KSRDPRU (Constitution of Standing Committees and Appointment of Ad-hoc Committees) Regulations, 2019 read along with section (30) of KSRDPRU Act which provides for the constitution of Committees for advising upon any matter relating to the University, pending approval of Executive Council.

Further, during the Academic Council Meeting held on 18-12-201,the Members complimented the University for constituting the Institutional Ethics Committee (IEC), involving persons from multiple disciplines.

The matter is placed before the Executive Council for perusal and ratification.

***RESOLUTION***

*As a mandate under guidelines of Indian Council of Medical Research, National Ethics guidelines for Biomedical and Health Research Involving Human Participants, 2017, University has re-constituted Institutional Ethics Committee to look into the matters of drafting and reviewing ethical issues regarding the public health related project work/ dissertation for M.P.H. Students, explains Hon'ble Vice Chancellor and requested the members to comment on the same.*

*Dr. R. S. Deshpande suggested that Members of IEC should be trained through Lectures or Workshops to make them aware of the ethical issues conducted by Experts. Faculty Members and*

Scanned with CamScanner

In light of the above the Academic Council during its meeting held on 18-12-2021 has recommended the following names for the conferment of Honorary Degrees during Second Annual Convocation of KSRDPR University.

1. **Smt. Sunanda Jayaram,** of Mysuru, contribution towards field of agriculture, organic farming and dealing with women issues.
2. **Ms Seetavva Jodatti,** of Belagavi, Padma Awardee, considering her contributions in the field of social service for the cause of Devadasi

The above matter is placed before the Executive Council for kind consideration.

## *RESOLUTION*

*Speaking on this, the Hon'ble Vice Chancellor requested the members to suggest the names to confer Honorary Degrees during 2nd Convocation in addition to **Smt. Sunanda Jayaram** and **Ms. Seetavva Jodatti** suggested in the Academic Council.*

*Replying to this, Dr. Prakash Bhat suggested to consider the exhaustive list which was prepared during the time of First Convocation and pointed that **Sri Popatrao Baguji Pawar** of Hiware Bazar, Padma Shri Awardee who has showed how to effectively implement Panchayat Raj System.*

*Dr. R. S. Deshpande suggested **Dr. Vijayananda, IAS (Retd.)** and **Smt. Sudha Murthy** considering their contribution to the society.*

*Dr. R. S. Deshpande further suggested the names **Dr. Gururaj Desh Deshpande**, Founder of Deshpande Foundation for his contribution to the Society, Shri S V Ranganath, IAS (Rtd), Former Chief Secretary, Govt of Karnataka and Chairman, Cafe Coffee Day for the contribution in Public Policy and service and **Dr. S. S. Meenakshisundaram IAS (Rtd), Vice Chairman, MYRADA** for the contribution in rural development.*

*After detailed suggestions and discussions on the same, the following 8 names were shortlisted which shall be forwarded to the Scrutiny Committee constituted by The Chancellor for recommending the names to confer Honorary Degrees in 2nd Annual Convocation.*

1. ***Smt. Sunanda Jayaram***
2. ***Ms. Seetavva Jodatti***
3. ***Sri Popatrao Baguji Pawar***
4. ***Dr. Vijayananda, IAS (Rtd.)***
5. ***Smt. Sudha Murthy***
6. ***Dr. Gururaj Desh Deshpande***
7. ***Shri S V Ranganath, IAS (Rtd)***
8. ***Dr. S. S. Meenakshisundaram, IAS (Rtd)***

Scanned with CamScanner

*Students also should be part of this training programme. Institutional Ethics Committee should not be limited only for M.P.H. Students, University should also consider constituting Research Ethics Committee at University level which applies to all the Students of the University to look into the matters of drafting and reviewing ethical issues while conducting research / project work activities.*

*Adding to this, Dr. Prakash Bhat suggested that Faculty Members and Committee Members of IEC should take up online courses which are certified globally by International Research Institutes regarding this.*

*Replying to this Vice Chancellor informed the council that a Research Ethics Committee will be constituted in coming days.*

*With above suggestions and discussions, Executive Council resolved to **approve the matter.***

**ವಿಷಯ ಸಂಖ್ಯೆ 10: ವಿಶ್ವವಿದ್ಯಾಲಯದಿಂದ ಸರ್ಕಾರಿ ಹಾಗೂ ಅನುಧಾನಿತ ಶಾಲೆಗಳಲ್ಲಿರುವ 1 ರಿಂದ 8 ನೇ ತರಗತಿಯಲ್ಲಿನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿ ಊಟದಲ್ಲಿ ಪೂರಕ ಪೋಷಕಾಂಶ ಆಹಾರವಾಗಿ ಮೊಟ್ಟೆಯನ್ನು ವಿತರಿಸುವ ಯೋಜನೆಯ ಉದ್ದೇಶದ ಫಲಶೃತಿಯನ್ನು (Impact Assessment) ಕೈಗೊಳ್ಳುವಕುರಿತು.**

<u>ಪರಾಮರ್ಶನ ಟಿಪ್ಪಣಿ:</u>

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿರುವ **'ಪೋಷಣ್ ಅಭಿಯಾನ'** ದಲ್ಲಿ ಮಕ್ಕಳಲ್ಲಿರುವ ಅಪೌಷ್ಠಿಕತೆಯನ್ನು ಹೋಗಲಾಡಿಸುವ ಉದ್ದೇಶದಿಂದ, ಕಲ್ಯಾಣ ಕರ್ನಾಟಕ ಪ್ರದೇಶದ 7 ಜಿಲ್ಲೆಗಳಲ್ಲಿನ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿರುವ 1 ರಿಂದ 8ನೇ ತರಗತಿಯಲ್ಲಿನ ವಿದ್ಯಾರ್ಥಿಗಳಿಗೆ ಪೂರಕ ಪೋಷಕಾಂಶ ಆಹಾರವಾಗಿ ಮೊಟ್ಟೆಯನ್ನು ವಿತರಿಸಲು ಕೇಂದ್ರ ಸರ್ಕಾರದ ಶಿಕ್ಷಣ ಮಂತ್ರಾಲಂಯ ಆದೇಶ ನೀಡಿರುತ್ತದೆ. ಸದರಿ ಕಾರ್ಯಕ್ರಮದ ಅನುಷ್ಠಾನ ಮತ್ತು ಮೇಲುಸ್ತುವಾರಿ ಜವಾಬ್ದಾರಿಯನ್ನು ಎರಡು ವಿಭಾಗಳ(ಕಲಬುರಗಿ ಮತ್ತು ಧಾರವಡ) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ , ಬೆಂಗಳೂರು ಆದೇಶ ನೀಡಿರುತ್ತಾರೆ.

ಈ ಮಹಾತ್ವಾಕಾಂಕ್ಷಿ ಯೋಜನೆಯ ಉದ್ದೇಶದ ಫಲಶೃತಿಯನ್ನು (Impact Assessment) ಕಂಡುಕೊಳ್ಳುವಂತಾಗಲು ಈ ಕಾರ್ಯಕ್ರಮದ ವ್ಯಾಪ್ತಿಗೆ ಬರುವ 7 ಜಿಲ್ಲೆಗಳಲ್ಲಿನ 2 ಜಿಲ್ಲೆಗಳನ್ನು ಯಾದೃಚ್ಛಿಕವಾಗಿ ಹಾಗೂ ಈ ಯೋಜನೆಯಿಂದ ಹೊರತಾದ ಒಂದು ಜಿಲ್ಲೆಯನ್ನು (ಗದಗ/ಚಿಕ್ಕೋಡಿ) ನಿಯಂತ್ರಿತ ಮಾದರಿ ಜಿಲ್ಲೆಯನ್ನಾಗಿ ಕಾರ್ಯಕ್ರಮದ **Impact Assessment** ಮಾಡಲು ನಿರ್ಧರಿಸಿರುತ್ತಾರೆ.

ಸದರಿ ಕಾರ್ಯಕ್ರಮದ ಫಲಶೃತಿಯ (Impact Assessment) ಬಗ್ಗೆ ವಿಶ್ವವಿದ್ಯಾಲಯದಲ್ಲಿ ಒಂದು ವೈಜ್ಞಾನಿಕ ಸಮೀಕ್ಷಾ ವರದಿ ಸಿದ್ಧಪಡಿಸಿ ಅಧ್ಯಯನದಲ್ಲಿ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಇವರಿಗೆ ಮಾರ್ಗದರ್ಶನ, ಸಹಾಯ ಹಾಗೂ ಸಹಕಾರವನ್ನು ನೀಡುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರು ಪತ್ರ ಸಂಖ್ಯೆ *ಗ್ರಾಅಪಂರಾ 08 ಪಂರಾ 2021,* ದಿನಾಂಕ *16-08-2021* ರಲ್ಲಿ ತಿಳಿಸಿರುತ್ತಾರೆ.

ಅದರಂತೆ, ಮೊದಲ ಹಂತದಲ್ಲಿ ಕಲಬುರಗಿ ವಿಭಾಗದ ಯಾದಗಿರಿಯ ಜಿಲ್ಲೆಯ ಯಾದಗಿರಿ ಮತ್ತು ಸುರಪುರ ತಾಲ್ಲೂಕಿನ ತಲಾ 11 ಶಾಲೆಗಳು ಮತ್ತು ಶಹಪುರ ತಾಲ್ಲೂಕಿನ 8 ಶಾಲೆಗಳನ್ನು, ಮುಂದುವರೆದು ಧಾರವಾಡ ವಿಭಾಗದ ಗದಗ ಜಿಲ್ಲೆಯ ಗದಗ ತಾಲ್ಲೂಕಿನ 9 ಶಾಲೆಗಳು, ರೋಣ ಮತ್ತು ಶಿರಹಟ್ಟಿ ತಾಲ್ಲೂಕಿನ ತಲಾ 11 ಶಾಲೆಗಳು, ಮುಂಡರಗಿ ತಾಲ್ಲೂಕಿನ 4 ಶಾಲೆಗಳು ಮತ್ತು ನರಗುಂದ ತಾಲ್ಲೂಕಿನ 3 ಶಾಲೆಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಸದರಿ ಅಧ್ಯಯನಕ್ಕೆ ಸಂಬಂಧಪಟ್ಟ ಪ್ರಶ್ನಾವಳಿಗಳನ್ನು ತಜ್ಞರಾದ ಡಾ. ಸುರೇಶ ಕೃಷ್ಣರಾವ, ಸಲಹೆಗಾರರು ವಿಶ್ವ ಆರೋಗ್ಯ ಸಂಸ್ಥೆ ಮತ್ತು ಸದಸ್ಯರು ವಿಶ್ವ ಬ್ಯಾಂಕ್ ಸಲಹಾ ಸಮಿತಿ ಇವರ ಸಲಹೆಯಂತೆ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಅಂತಿಮಗೊಳಿಸಲಾಗಿದೆ. ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ತಂಡವು 10 ದಿನಗಳ ಮೂಲಾಧಾರ ಅಧ್ಯಾಯನ (Baseline Study)ಕ್ಕಾಗಿ ಮಕ್ಕಳ ಎತ್ತರ, ತೂಕ ಹಾಗೂ ಆರೋಗ್ಯದ ಮಾನದಂಡಗಳ ಮಾಹಿತಿಯನ್ನು ಸಂಗ್ರಹ ಮಾಡಿ ಅದರ ವರದಿಯನ್ನು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಮತ್ತು ಧಾರವಾಡ ಇವರಿಗೆ ಸಲ್ಲಿಸಲಾಗುವುದು. ನಂತರ ಈ ಶಾಲಾ ಮಕ್ಕಳಿಗೆ ಮಧ್ಯಾಹ್ನ ಊಟದಲ್ಲಿ ಪೂರಕ ಪೋಷಕಾಂಶ ಆಹಾರವಾಗಿ ಮೊಟ್ಟೆಯನ್ನು ವಿತರಿಸಿ ಅದರ ಪ್ರಭಾವವನ್ನು ನಾಲ್ಕು ತಿಂಗಳ ನಂತರ ಪುನಃ ಮಕ್ಕಳ ಆರೋಗ್ಯದ ಮಾನದಂಡಗಳ ಮಾಹಿತಿಯನ್ನು ಅಧ್ಯಾಯನಕ್ಕೆ ನೀಡಲಾಗುವುದು.

Scanned with CamScanner

ವಿಶ್ವವಿದ್ಯಾಲಯವು ಸದರಿ ಯೋಜನೆಯನ್ನು ವಿಶ್ವವಿದ್ಯಾಲಯದ ಗುರಿ ಮತ್ತು ದೃಷ್ಟಿಯನ್ನು ಸಾಕಾರಗೊಳಿಸಲು ಪೂರಕವಾಗಿದ್ದು ವಿಶ್ವವಿದ್ಯಾಲಯದ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಕಲಿಕೆ ಮತ್ತು ಸಂಶೋದನೆ ನಡೆಸಲು ಒಳ್ಳೆಯ ಸದವಕಾಶ ಹೊಂದಿರುತ್ತದೆ.

ಸದರಿ ಯೋಜನೆಗೆ ಅಂದಾಜು ರೂ 25.5 ಲಕ್ಷದ (ರೂ. ಇಪ್ಪತ್ತೈದು ಲಕ್ಷದ ಐವತ್ತು ಸಾವಿರಗಳು ರೂ ಮಾತ್ರ) ವೆಚ್ಚವಾಗಬಹುದಾಗಿದ್ದು ಅದರಂತೆ ಆಯವ್ಯಯ ಸಿದ್ಧಪಡಿಸಲಾಗಿರುತ್ತದೆ (ಪ್ರತಿಯನ್ನು ಲಗತ್ತಿಸಲಾಗಿದೆ). ಇದಕ್ಕೆ ತಗುಲುವ ವೆಚ್ಚವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಭರಿಸಲು ಅಂದಾಜು ಪಟ್ಟಿ ಸಲ್ಲಿಸುವಂತೆ, ದಿನಾಂಕ: 23-11-2021 ರಂದು ನಡೆದ ಸಭೆಯಲ್ಲಿ, ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ, ಕಲಬುರ್ಗಿ, ಇವರು ತಿಳಿಸಿದಂತೆ, ಸದರಿ ಪ್ರಸ್ತಾವನೆಯನ್ನು, ಈಗಾಗಲೇ ಅವರಿಗೆ ಸಲ್ಲಿಸಲಾಗಿದೆ. ಮುಂದುವರೆದು, ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಇವರೊಂದಿಗೆ ಚರ್ಚಿಸಿದಂತೆ, ಸದರಿ ಅಂದಾಜು ಪಟ್ಟಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಅನುದಾನ ಮಂಜೂರಾಗಿದ್ದಲ್ಲಿ, ಅದರಿಂದ, ಇಲ್ಲವಾದಲ್ಲಿ ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೂ ಸಹ ಆಯವ್ಯಯದ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಅದನ್ನು ಪರೀಶಿಲಿಸಿ ಮುಂದಿನ ಅಗತ್ಯ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿರುತ್ತಾರೆ. ಇದಕ್ಕೆ ಸಂಬಂಧ ಪಟ್ಟಂತೆ ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೂ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಆದರೆ, ಸದರಿ ಯೋಜನೆಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವದರಿಂದ, ಪ್ರಾರಂಭದಲ್ಲಿ ಬೇಕಾಗುವ ವೆಚ್ಚಗಳನ್ನು ವಿಶ್ವವಿದ್ಯಾಲಯದ ಸಂಶೋದನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಕೇಂದ್ರಕ್ಕೆ ಅನುಮೋದನೆಗೊಂಡ ಆಯವ್ಯಯದಲ್ಲಿ ಭರಿಸಬಹುದಾಗಿರುತ್ತದೆ.

ಸದರಿ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿದೆ.

*ನಿರ್ಣಯ*

*ಸದರಿ ವಿಷಯದ ಬಗ್ಗೆ ವಿವರಿಸುತ್ತ, ಮಾನ್ಯ ಕುಲಪತಿಗಳು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ನೀಡಿರುವ ಮಾರ್ಗಸೂಚಿಗಳು ಮತ್ತು ಡಾ. ಸುರೇಶ ಕೃಷ್ಣರಾವ್, ಸಲಹೆಗಾರರು ವಿಶ್ವ ಆರೋಗ್ಯ ಸಂಸ್ಥೆ ಮತ್ತು ಸದಸ್ಯರು ವಿಶ್ವ ಬ್ಯಾಂಕ್ ಸಲಹಾ ಸಮಿತಿ ಇವರ ಸಲಹೆಯಂತೆ ಸಿದ್ಧಪಡಿಸಿದ ಪ್ರಶ್ನಾವಳಿಗಳ ಆಧಾರದ ಮೇಲೆ ಮೊದಲ ಹಂತದಲ್ಲಿ ಕಲಬುರಗಿ ವಿಭಾಗದ ಯಾದಗಿರಿ ಜಿಲ್ಲೆಯ ಯಾದಗಿರಿ ಮತ್ತು ಸುರಪುರ ತಾಲ್ಲೂಕಿನ ತಲಾ 11 ಶಾಲೆಗಳು ಮತ್ತು ಶಹಪುರ ತಾಲ್ಲೂಕಿನ 8 ಶಾಲೆಗಳು, ಧಾರವಾಡ ವಿಭಾಗದ ಗದಗ ಜಿಲ್ಲೆಯ ಗದಗ ತಾಲ್ಲೂಕಿನ 9 ಶಾಲೆಗಳು, ರೋಣ ಮತ್ತು ಶಿರಹಟ್ಟಿ ತಾಲ್ಲೂಕಿನ ತಲಾ 11 ಶಾಲೆಗಳು, ಮುಂಡರಗಿ ತಾಲ್ಲೂಕಿನ 4 ಶಾಲೆಗಳು ಮತ್ತು ನರಗುಂದ ತಾಲ್ಲೂಕಿನ 3 ಶಾಲೆಗಳನ್ನು ಆಯ್ಕೆ ಮಾಡಿ ಸುಮಾರು 4,500 ಶಾಲಾ ಮಕ್ಕಳ ಎತ್ತರ, ತೂಕ ಹಾಗೂ ಆರೋಗ್ಯದ ಮಾನದಂಡಗಳ ಮಾಹಿತಿಯನ್ನು ಅಧ್ಯಯನಕ್ಕಾಗಿ ಸಂಗ್ರಹ ಮಾಡಲಾಗಿದೆ. ಸದರಿ ಯೋಜನೆಗೆ ತಗಲುವ ವೆಚ್ಚವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಭರಿಸುವುದೆಂದು ತಿಳಿಸಲಾಗಿದ್ದು, ಅದಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂದುವರೆದು, ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಇವರೊಂದಿಗೆ ಚರ್ಚಿಸಿದಂತೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಸದರಿ ಯೋಜನೆಗೆ ಅನುದಾನ ದೊರಕದಿದ್ದಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಅನುದಾನ ಬಿಡುಗಡೆಗೊಳಿಸಬಹುದಾಗಿದೆ ಅಥವಾ, ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಅನುದಾನದಲ್ಲಿ ಸದರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ತಿಳಿಸಿರುವರು ಎಂಬುದನ್ನು ವಿವರಿಸಿದರು.*

*ಡಾ. ಆರ್. ಎಸ್. ದೇಶಪಾಂಡೆ ಅವರು ಅಭಿನಂದಿಸುತ್ತ, ಸದರಿ ಯೋಜನೆಗಾಗಿ ಹಣಕಾಸಿನ ವಿಷಯದಲ್ಲಿ ತೊಂದರೆಯಾದಲ್ಲಿ ಹುಬ್ಬಳ್ಳಿಯ ದೇಶಪಾಂಡೆ ಫೌಂಡೇಶನ್ ಅವರ ಸಹಾಯವನ್ನು ಪಡೆಯಬಹುದಾಗಿದೆ ಎಂದು ತಿಳಿಸಿದರು.*

*ಸಭೆಯ ಸದಸ್ಯರೆಲ್ಲರೂ ವಿಶ್ವವಿದ್ಯಾಲಯದ ಈ ಕಾರ್ಯ ಸಾಧನೆಯನ್ನು ಪ್ರಶಂಶಿಸುತ್ತ, ಮೇಲೆ ವಿವರಿಸಿರುವುದನ್ನು ಪರಿಗಣಿಸಿ ಸದರಿ ವಿಷಯವನ್ನು ಅನುಮೋದಿಸಿದರು.*

**ವಿಷಯ ಸಂಖ್ಯೆ 11: ವಿಶ್ವವಿದ್ಯಾಲಯಕ್ಕೆ ಮಂಜೂರಾದ ಜಾಗದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸಲು 5 ಎಕರೆ ಜಮೀನನ್ನು ನಿಗದಿಪಡಿಸಲು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.**

<u>ಪರಾಮರ್ಶನ ಟಿಪ್ಪಣಿ:</u>

ಗದಗ ಜಿಲ್ಲೆಯು ಸೈಕ್ಲಿಂಗ್ ಕ್ರೀಡೆಯಲ್ಲಿ ಹೆಸರುವಾಸಿಯಾಗಿದ್ದು ಸ್ಥಳಿಯ ಕ್ರೀಡಾಪಟುಗಳಿಗೆ ಉತ್ತೇಜನೆ ನೀಡಿರುವುದರ ಪ್ರಯುಕ್ತ ಒಳ್ಳೆಯ ಪ್ರತಿಭೆಗಳು ಸೈಕ್ಲಿಂಗ್‌ನಲ್ಲಿ ರಾಷ್ಟ್ರ ಮತ್ತು ಅಂತರಾಷ್ಟ ಮಟ್ಟದಲ್ಲಿ ಪದಕ ಪಡೆದುಕೊಳ್ಳುತ್ತಾ ಬಂದಿದ್ದಾರೆ. ಈ ಭಾಗದ ಸೈಕ್ಲಿಂಗ್ ಕ್ರೀಡಾಪಟುಗಳಿಗೆ ಸೈಕ್ಲಿಂಗ್ ವೆಲೋಡ್ರಮ್ ಮೈದಾನ ಇಲ್ಲದಿರುವದರಿಂದ ಬೇರೆ ಜಿಲ್ಲೆಗಳಿಗೆ ತೆರಳಿ ತರಬೇತಿ ಪಡೆಯುವ ಅನಿವಾರ್ಯತೆ ಇರುತ್ತದೆ. ಆದ್ದರಿಂದ ಈ ಭಾಗದ ಸೈಕ್ಲಿಂಗ್ ಕ್ರೀಡಾಪಟುಗಳಿಗೆ ಸೈಕ್ಲಿಂಗ್ ತರಬೇತಿ ಪಡೆಯಲು

Scanned with CamScanner

ಸೈಕ್ಲಿಂಗ್ ವೆಲೋಡ್ರಮ್ ಅಗತ್ಯವಿದ್ದು ಮತ್ತು ಭಾರತ ಸರಕಾರದ, "ಖೇಲೋ ಇಂಡಿಯಾ" ಯೋಜನೆಯಡಿಯಲ್ಲಿ ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸಲು ಅವಕಾಶವಿರುವುದಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ರವರು ಮನವಿ ಪತ್ರ ಸಂಖ್ಯೆ:ಸನಿ/ಯುಸೇಕ್ರೀಇ/ಗದಗ/ಸಿಆರ್-57-2020-21,ದಿನಾಂಕ:10-11-2021, ಸಲ್ಲಿಸಿರುತ್ತಾರೆ. ಗದಗ ಜಿಲ್ಲೆಯ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ ಆವರಣದಲ್ಲಿ ಲಭ್ಯವಿರುವ ಜಮೀನಿನ ಪೈಕಿ, ಗರಿಷ್ಠ 10.00 ಎಕರೆ (ಹತ್ತು ಎಕರೆ) ಜಾಗವನ್ನು ಒದಗಿಸಿಕೊಡಲು ಪತ್ರದಲ್ಲಿ ಕೋರಿರುತ್ತಾರೆ.

ಮುಂದುವರಿದು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ ದಲ್ಲಿ ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸುವುದರಿಂದ ಗದಗ ಜಿಲ್ಲೆಯಲ್ಲಿ ಬರುವಂತಹ ಕ್ರೀಡಾ ಪಟುಗಳಿಗೆ ಅಷ್ಟೆ ಅಲ್ಲದೆ ಕರ್ನಾಟಕದಲ್ಲಿ ಇರುವಂತಹ ಸೈಕ್ಲಿಂಗ್ ಕ್ರೀಡಾಪಟುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ವೆಲೋಡ್ರಮ್ ವಿಭಾಗದಲ್ಲಿ ಭಾಗವಹಿಸಲು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅವಕಾಶಗಳು ಒದಗಿ ಬರಲಿವೆ ಹಾಗೂ ವಿಶ್ವವಿದ್ಯಾಲಯದ ಘನತೆಯನ್ನು ಹೆಚ್ಚಿಸಲಿದೆ. ವಿಶ್ವವಿದ್ಯಾಲಯದ 353 ಎಕರೆ 12 ಗುಂಟೆ ಜಾಗ ಹೊಂದಿದ್ದರೂ, ಅದು ಗುಡ್ಡಗಾಡು ಪ್ರದೇಶ ಹೊಂದಿರುವುದರಿಂದ, ಸಮತಟ್ಟಾದ ಜಮೀನಿಗೆ ಕೊರತೆಯಿರುವ ಕಾರಣ, ವಿಶ್ವವಿದ್ಯಾಲಯಕ್ಕೆ ಮಂಜೂರಾದ ಜಾಗದಲ್ಲಿ 5 ಎಕರೆ ಜಾಗವು ಸೂಕ್ತವಿರುವುದಾಗಿ ಕಂಡು ಬಂದಿರುವದರಿಂದ, ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸಲು 5 ಎಕರೆ ಜಾಗವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಇವರಿಗೆ ಅಗತ್ಯತೆಗನುಸಾರ ನಿಗದಿಪಡಿಸಲು, ಸದರಿ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿದೆ.

*ನಿರ್ಣಯ*

*ಸದರಿ ವಿಷಯದ ಬಗ್ಗೆ ಮಾತನಾಡುತ್ತ, ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ಜಮೀನಿನಲ್ಲಿ 5 ಎಕರೆ ಜಾಗವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಇವರಿಗೆ ಅಗತ್ಯತೆಗನುಸಾರ ನಿಗದಿಪಡಿಸಿದರೆ ಗದಗ ಜಿಲ್ಲೆಯಲ್ಲಿ ಸೈಕ್ಲಿಂಗ್ ಕ್ರೀಡಾಪಟುಗಳಿಗೆ ಹಾಗೂ ಇತರೆ ಕ್ರೀಡಾ ಚಟುವಟಿಕೆಗಳಿಗೆ ರಾಜ್ಯ ಮಟ್ಟದಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಹೆಚ್ಚಿನ ಅವಕಾಶ ನೀಡಿದಂತಾಗುತ್ತದೆ. ಇದರಿಂದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೂ ಕ್ರೀಡಾ ಸ್ಫೂರ್ತಿ ಹಾಗೂ ಅವಕಾಶಗಳನ್ನು ಕಲ್ಪಿಸಿದಂತಾಗುತ್ತದೆ. "ಖೇಲೋ ಇಂಡಿಯಾ" ಯೋಜನೆಯಡಿಯಲ್ಲಿ 'ಸೈಕ್ಲಿಂಗ್ ವೆಲೋಡ್ರಮ್' ನಿರ್ಮಿಸಲು ಕೇಂದ್ರ ಸರ್ಕಾರವೇ ಅನುದಾನವನ್ನು ನೀಡುತ್ತದೆ ಹಾಗೂ ಇದಕ್ಕೆ ಸಂಬಂಧಿಸಿದಂತೆ, ಶ್ರೀ ಅಬ್ದುಲ್ ಹಕೀಂ ಅವರ ಅಭಿಪ್ರಾಯ ತಿಳಿಸಬೇಕು ಎಂದು ಹೇಳಿದರು.*

*ಶ್ರೀ ಅಬ್ದುಲ್ ಹಕೀಂ ಅವರು ಸಕಾರಾತ್ಮಕವಾಗಿ ಸ್ಪಂದಿಸುತ್ತ, ವಿಶ್ವವಿದ್ಯಾಲಯದಲ್ಲಿ ಹೆಚ್ಚು ಕ್ರೀಡಾ ಚಟುವಟಿಕೆಗಳು ನಡೆಸಲು ಅದಕ್ಕೆ ಬೇಕಾಗಿರುವ ಸೂಕ್ತ ಮೂಲಭೂತ ಸೌಕರ್ಯಗಳನ್ನು ಹಂತ ಹಂತವಾಗಿ ನಿರ್ಮಿಸಬೇಕು ಎಂದು ತಿಳಿಸಿದರು.*

*ಇದಕ್ಕೆ ಉತ್ತರಿಸುತ್ತ, ಡಾ. ಆರ್. ಎಸ್. ದೇಶಪಾಂಡೆಯವರು ವಿಶ್ವವಿದ್ಯಾಲಯದಲ್ಲಿ ನಡೆಯುವ ಯಾವುದೇ ಚಟುವಟಿಕೆಯು ವಿಶ್ವವಿದ್ಯಾಲಯದ ಹೆಸರಿನಲ್ಲಿಯೇ ನಡೆಸಬೇಕು. ವಿಶ್ವವಿದ್ಯಾಲಯಕ್ಕೆ ಮೀಸಲಿರುವ ಜಮೀನು, ವಿಶ್ವವಿದ್ಯಾಲಯದ ಹೆಸರಿನಲ್ಲಿಯೇ ಉಳಿಯಬೇಕು ಎಂದು ತಿಳಿಸಿದರು.*

*ಮೇಲಿನ ಸಲಹೆಗಳೊಂದಿಗೆ ಸದರಿ ವಿಷಯವನ್ನು ಸಭೆಯು ಅನುಮೋದಿಸಿತು.*

**ವಿಷಯ ಸಂಖ್ಯೆ 12: 2021-22 ನೇ ಸಾಲಿಗೆ ವಿಶ್ವವಿದ್ಯಾಲಯ ನಿರ್ವಹಿಸಿ ನಡೆಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ವಾಸ್ತವ್ಯವಿರುವ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮುಂಗಡ ಭೋಜನಾ ವೆಚ್ಚವನ್ನು ಪಾವತಿಸುವ ಬಗ್ಗೆ.**

<u>ಪರಾಮರ್ಷನ ಟಿಪ್ಪಣಿ:</u>

ವಿಶ್ವವಿದ್ಯಾಲಯ ನಿರ್ವಹಿಸಿ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ವಾಸ್ತವ್ಯವಿರುವ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮುಂಗಡ ಭೋಜನಾ ವೆಚ್ಚವನ್ನು ಪಾವತಿಸಲು ರಾಜ್ಯ ಸರ್ಕಾರ ಅವಕಾಶ ಕಲ್ಪಿಸಿದೆ. ಈ ಭೋಜನಾ ವೆಚ್ಚವನ್ನು ಸರ್ಕಾರವು ಸಮಾಜ ಕಲ್ಯಾಣ ಇಲಾಖೆ ಮೂಲಕ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ 1600/- (ರೂ ಒಂದು ಸಾವಿರದ ಆರನೂರು ಮಾತ್ರ) ರಂತೆ ವರ್ಷದ 11 ತಿಂಗಳ ಅವಧಿಗೆ ಮಂಜೂರಾತಿ ನೀಡಿ ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತದೆ. ರಾಜ್ಯದ ಇತರೆ ವಿಶ್ವವಿದ್ಯಾಲಯಗಳು ಸಹ ಸದರಿ ವೆಚ್ಚವನ್ನು ವಿಶ್ವವಿದ್ಯಾಲಯದಿಂದ ಭರಿಸಿ ನಂತರ ಸಮಾಜ ಕಲ್ಯಾಣ ಇಲಾಖೆ ಬಿಡುಗಡೆ ಮಾಡುವ ಹಣದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಪದ್ಧತಿಯನ್ನು ಅನುಸರಿಸುತ್ತಿವೆ.

ಸರ್ಕಾರಿ ಆದೇಶ ಸಂಖ್ಯೆ ಸಕಇ : 159 ಪಕವಿ 2018 (ಭಾ) ಬೆಂಗಳೂರು ದಿನಾಂಕ : 19-07-2019 ರಂತೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಭೋಜನ ವೆಚ್ಚವನ್ನು ಮಾಹೆಯನ 1600 ರಂತೆ ಪಾವತಿಸಲು ಆದೇಶಿಸಿದೆ. ವಿಶ್ವವಿದ್ಯಾಲಯ ನಡೆಸುತ್ತಿರುವ ಐದು ಸ್ನಾತಕ ಕೋರ್ಸುಗಳಿಗೆ 2021-22 ನೇ ಶೈಕ್ಷಣಿಕ ಸಾಲಿನ ಎಲ್ಲ ಪ್ರೋಗ್ರಾಮ್‌ಗಳಿಗೆ ನಿಗದಿಪಡಿಸಿದ ಸೀಟ್ ಮ್ಯಾಟ್ರಿಕ್ಸ್ ರನ್ವಯ ಸುಮಾರು 40 ಪರಿಶಿಷ್ಟ ಜಾತಿ ಮತ್ತು 10 ಪರಿಶಿಷ್ಟ ಪಂಗಡದ ಹೀಗೆ ಒಟ್ಟು 50 ವಿದ್ಯಾರ್ಥಿಗಳು ಪ್ರವೇಶ

Scanned with CamScanner

ಪಡೆದುಕೊಳ್ಳಬಹುದಾಗಿದೆ. 2021–22 ನೇ ಸಾಲಿಗೆ ವಿಶ್ವವಿದ್ಯಾಲಯ ನಿರ್ವಹಿಸಿ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳಿಗೆ ಮಾಹೆಯಾನ ಪ್ರತಿ ವಿದ್ಯಾರ್ಥಿಗೆ ರೂ. 1600/– ರಂತೆ ಒಂದು ತಿಂಗಳಿಗೆ ರೂ. 80000/– ವೆಚ್ಚವಾಗಲಿದೆ. ಪ್ರಸುತ್ತ ವಿಶ್ವವಿದ್ಯಾಲಯದ ವಸತಿ ನಿಲಯಗಳಲ್ಲಿ ಪ್ರವೇಶ ಪಡೆದುಕೊಂಡ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮಾಸಿಕ ಭೋಜನಾ ವೆಚ್ಚವನ್ನು ಪಾವತಿಸಬೇಕಾಗಿರುತ್ತದೆ.

ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್‌ನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

*ನಿರ್ಣಯ*

*ಪ್ರಸಕ್ತ ಸಾಲಿನಿಂದ ಪ್ರಾರಂಭವಾಗಿರುವ ಐದು ಸ್ನಾತಕ ಕೋರ್ಸುಗಳಿಗೆ 2021–22ನೇ ಶೈಕ್ಷಣಿಕ ಸಾಲಿನ ಎಲ್ಲ ಪ್ರೋಗ್ರಾಮ್‌ಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸರ್ಕಾರಿ ಆದೇಶದನ್ವಯ ಮಾಸಿಕ ಭೋಜನಾ ವೆಚ್ಚಗಳಿಗೆ ಮುಂಗಡ ಹಣ ಪಾವತಿಸಲು ಸಭೆಯು ಅನುಮೋದಿಸಿತು.*

**ಟೇಬಲ್ ಅಜೆಂಡಾ 1: ದಿನಾಂಕ 18–12–2021 ರಂದು online virtual meeting mode ನಲ್ಲಿ ಜರುಗಿದ 7ನೇ ಶೈಕ್ಷಣಿಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಕುರಿತು.**

<u>ಪರಾಮರ್ಶನ ಟಿಪ್ಪಣಿ:</u>

ದಿನಾಂಕ 18–12–2021 ರಂದು ಜರುಗಿದ 7ನೇ ಶೈಕ್ಷಣಿಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರ ಪರಿಗಣನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ (ಅನುಬಂಧ 1).

*ನಿರ್ಣಯ*

*ದಿನಾಂಕ 18–12–2021 ರಂದು ಜರುಗಿದ 7ನೇ ಶೈಕ್ಷಣಿಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಮಾನ್ಯ ಕುಲಸಚಿವರು ವಿವರಿಸಿ ಹೇಳಿದರು. ಸಭೆ ಸದಸ್ಯರು ಅದನ್ನು ಪರಿಗಣಿಸಿ, ಆಕ್ಷೇಪಣೆ ಇಲ್ಲದೆ ಅನುಮೋದಿಸಿದರು.*

**ಟೇಬಲ್ ಅಜೆಂಡಾ 2: ವಿಶ್ವವಿದ್ಯಾಲಯದ ಆವರಣದಲ್ಲಿ ಸ್ವಾಮಿ ವಿವೇಕಾನಂದ ಯುವ ಕೇಂದ್ರ ನಿರ್ಮಿಸುವ ಕುರಿತು:**

<u>ಪರಾಮರ್ಶನಟಿಪ್ಪಣಿ:</u>

ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ ಪರಿಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ "ಗ್ರಾಮೀಣ ಬೇರು, ಜಾಗತಿಕ ಮೇರು" ಎಂಬ ಧ್ಯೇಯ ವಾಕ್ಯದೊಂದಿಗೆ ತನ್ನ ಶೈಕ್ಷಣಿಕ, ಸಂಶೋಧನೆ, ತರಬೇತಿ ಮತ್ತು ಅಧ್ಯಯನದ ಮೂಲಕ ಕರ್ನಾಟಕ ರಾಜ್ಯದ ಗ್ರಾಮೀಣ ಸಂಸ್ಥೆಗಳ ಸುಸ್ಥಿರ ಅಭಿವೃದ್ಧಿಗಾಗಿ ವಿಶ್ವವಿದ್ಯಾಲಯವು ಸ್ಥಾಪಿಸಲಾಗಿದ್ದು, 2017–18 ಸಾಲಿನಿಂದ ವಿಶ್ವವಿದ್ಯಾಲಯವು ತನ್ನ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಿದೆ.

ವಿಶ್ವವಿದ್ಯಾಲಯದ ಆವರಣದಲ್ಲಿ ಸಬರಮತಿ ಆಶ್ರಮದ ಪ್ರತಿಕೃತಿ ಕಟ್ಟಡ ಲೋಕಾರ್ಪಣೆಗೊಂಡು ವಿಶ್ವವಿದ್ಯಾಲಯದ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಮತ್ತು ಸಾಮಾಜಿಕವಾಗಿ ಒಳ್ಳೆಯ ಸ್ಪೂರ್ತಿ ಕೇಂದ್ರವಾಗಿದೆ ಎಂಬುವುದು ಹೆಮ್ಮೆಯ ವಿಷಯವಾಗಿದೆ.

ಮುಂದುವರೆದು, ದಿನಾಂಕ 8-10-2021 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯಲ್ಲಿ ಎಲ್ಲ ಸದಸ್ಯರು ಅನುಮೋದಿಸಿದಂತೆ ವಿಶ್ವವಿದ್ಯಾಲಯದ ಆವರಣದಲ್ಲಿ ಸ್ವಾಮಿ ವಿವೇಕಾನಂದ ಅಧ್ಯಯನ ಪೀಠ ಸ್ಥಾಪಿಸುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ಯುವ ಸಮೂಹಕ್ಕೆ ಸ್ವಾಮಿ ವಿವೇಕಾನಂದರ ಆದರ್ಶಗಳು ವ್ಯಕ್ತಿತ್ವ ವಿಕಸನಕ್ಕೆ ಸ್ಪೂರ್ತಿದಾಯಕವಾಗಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಅದಕ್ಕಾಗಿ, ಈಗಾಗಲೇ ಮುಂದಿನ ಆರ್ಥಿಕ ವರ್ಷದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಕಟ್ಟಡ ನಿರ್ಮಾಣಗಳ ಅಂದಾಜು ಪಟ್ಟಿಯ ಆಯವ್ಯಯದ ಜೊತೆಗೆ ಸ್ವಾಮಿ ವಿವೇಕಾನಂದ ಯುವ ಕೇಂದ್ರ ನಿರ್ಮಾಣವನ್ನು ತಜ್ಞರ ಸಲಹೆ ಮತ್ತು ಸೂಚನೆಗಳಂತೆ ಕಾಮಗಾರಿ ಕೈಗೆತ್ತಿಕೊಳ್ಳುವುದು ಸೂಕ್ತವಾಗಿರುತ್ತದೆ.

ಸ್ವಾಮಿ ವಿವೇಕಾನಂದ ಯುವ ಕೇಂದ್ರ, ಇದು ಒಂದು ಪಾರಂಪರಿಕ ಕಟ್ಟಡವಾಗಬಹುದ್ದಾದರಿಂದ ಸದರಿ ಕಟ್ಟಡಗಳ ವಿನ್ಯಾಸ ಹಾಗೂ ನಿರ್ಮಾಣಕ್ಕೆ ಸಹಾಯಕವಾಗಲು ಮತ್ತು ಅದರಲ್ಲಿ ಅನುಭವವಿರುವ ವಾಸ್ತುಶಿಲ್ಪಿಗಳನ್ನು ನೇಮಕ (Empanel) ಮಾಡುವುದು ಅವಶ್ಯಕವಾಗಿರುತ್ತದೆ.

Scanned with CamScanner

ಮುಂದುವರೆದು, ಸ್ವಾಮಿ ವಿವೇಕಾನಂದ ಯುವ ಕೇಂದ್ರದ ಸ್ಥಾಪನೆ ಮತ್ತು ಸದರಿ ಕಟ್ಟಡಗಳ ನಿರ್ಮಾಣಕ್ಕೆ ವಾಸ್ತುಶಿಲ್ಪಿಗಳನ್ನು ನೇಮಕ (Empanel) ಮಾಡುವ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿದೆ.

*ನಿರ್ಣಯ*

*ಸದರಿ ವಿಷಯದ ಬಗ್ಗೆ ಮಾತನಾಡುತ್ತ, ಮಾನ್ಯ ಕುಲಪತಿಗಳು ಹಿಂದಿನ ಕಾರ್ಯನಿರ್ವಾಹಕ ಪರಿಷತ್ತಿನಲ್ಲಿ ಅನುಮೋದಿಸಿದಂತೆ ಹಾಗೂ ವ್ಯಕ್ತಪಡಿಸಿದ ಆಶಯದಂತೆ ವಿಶ್ವವಿದ್ಯಾಲಯದ ಸಬರಮತಿ ಆಶ್ರಮದ ಸಮೀಪದಲ್ಲಿ* ***ವಿವೇಕಾನಂದ ಯುವ ಕೇಂದ್ರ (Vivekananda Centre for Youth-Voice without Form)*** *ಕಟ್ಟಡವನ್ನು ಜನವರಿ ತಿಂಗಳಿನಲ್ಲಿ ಕಟ್ಟಡದ ಶಂಕು ಸ್ಥಾಪನೆ ಮಾಡಲು ಸಿದ್ಧತೆ ಮಾಡಲಾಗಿದೆ. ಸದರಿ ಕೇಂದ್ರದ ಕಾರ್ಯಚಟುವಟಿಕೆಗಳನ್ನು, ರೂಪುರೇಷಗಳನ್ನು ಶಿರೋನಾಮೆಯನ್ನು ತಜ್ಞರ ಸಲಹೆ ಸೂಚನೆಗಳ ಮೇರೆಗೆ ನಂತರದ ದಿನಮಾನಗಳಲ್ಲಿ ನಿರ್ಧರಿಸಬಹುದಾಗಿದೆ ಎಂದು ತಿಳಿಸಿದರು. ಮುಂದುವರೆದು, ಈ ಸೌಧವು ಒಂದು ಐತಿಹಾಸಿಕ ಹಾಗೂ ಪಾರಂಪರಿಕ ಕಟ್ಟಡವಾಗುವುದರಿಂದ ಇದರಲ್ಲಿ ವಾಸ್ತು ಶಿಲ್ಪಿ ಪರಿಣಿತರುಗಳನ್ನು ವಿಶ್ವವಿದ್ಯಾಲಯದ ವಾಸ್ತು ಶಿಲ್ಪಿಗಳ ಪಟ್ಟಿಯಲ್ಲಿ ನೇಮಕ (Empanel) ಮಾಡುವ ಅವಶ್ಯಕತೆ ಇದೆ ಎಂದು ತಿಳಿಸಿದರು.*

*ಹಣಕಾಸು ಅಧಿಕಾರಿಗಳು ಈ ವಿಷಯದ ಬಗ್ಗೆ ಮಾತನಾಡುತ್ತ, ಪ್ರಸ್ತುತ ಎಂಪನಲ್ ಆಗಿರುವ ವಾಸ್ತಶಿಲ್ಪಿಗಳನ್ನು ಹೊರತುಪಡಿಸಿ, ಪಾರಂಪರಿಕ ಕಟ್ಟಡಗಳಲ್ಲಿ ಪರಿಣಿತಿ ಹೊಂದಿರುವ ಸೂಕ್ತ ವಾಸ್ತು ಶಿಲ್ಪಿಗಳನ್ನು ಟೆಂಡರ್ ಪ್ರಕ್ರಿಯೆ ಮೂಲಕ ನೇಮಕ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.*

*ಸದರಿ ವಿಷಯಕ್ಕೆ ಸಕಾರಾತ್ಮಕವಾಗಿ ಸ್ಪಂದಿಸುತ್ತ, ಸಭೆಯ ಸದಸ್ಯರು ಅನುಮೋದಿಸಿದರು.*

**ಟೇಬಲ್ ಅಜೆಂಡಾ 3: ವಿಶ್ವವಿದ್ಯಾಲಯದ ಆವರಣದಲ್ಲಿ ಅಧ್ಯಯನ ಶಾಲೆ-2 ಮತ್ತು ಅಧ್ಯಯನ ಶಾಲೆ-3 ನಿರ್ಮಿಸುವ ಕುರಿತು:**

<u>ಪರಾಮರ್ಶನಟಿಪ್ಪಣಿ:</u>

ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ ಪರಿಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ "ಗ್ರಾಮೀಣ ಬೇರು, ಜಾಗತಿಕ ಮೇರು" ಎಂಬ ಧ್ಯೇಯ ವಾಕ್ಯದೊಂದಿಗೆ ತನ್ನ ಶೈಕ್ಷಣಿಕ, ಸಂಶೋದನೆ, ತರಬೇತಿ ಮತ್ತು ಅಧ್ಯಯನದ ಮೂಲಕ ಕರ್ನಾಟಕ ರಾಜ್ಯದ ಗ್ರಾಮೀಣ ಸಂಸ್ಥೆಗಳ ಸುಸ್ಥಿರ ಅಭಿವೃದ್ಧಿಗಾಗಿ ವಿಶ್ವವಿದ್ಯಾಲಯವು ಸ್ಥಾಪಿಸಲಾಗಿದ್ದು, 2017-18 ಸಾಲಿನಿಂದ ವಿಶ್ವವಿದ್ಯಾಲಯವು ತನ್ನ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಿದೆ.

ಪ್ರಸಕ್ತವಾಗಿ ವಿಶ್ವವಿದ್ಯಾಲಯದಲ್ಲಿ 10 ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳು ಮತ್ತು 5 ಸ್ನಾತಕ ಪದವಿ ಕಾರ್ಯಕ್ರಮಗಳು ನಡೆಸಲಾಗುತ್ತಿರುತ್ತದೆ. ಈಗಾಗಲೇ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ನಲ್ಲಿ ಅಧ್ಯಯನ ಶಾಲೆ-1 ಉದ್ಘಾಟನೆಗೊಂಡು ತರಗತಿಗಳು ಜರುಗುತ್ತಿವೆ. ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿರುವುದರಿಂದ ಇನ್ನೂ ಹೆಚ್ಚಿನ ಸಂಖ್ಯೆಯ ತರಗತಿಗಳು, ಪ್ರಯೋಗಶಾಲೆಗಳು, ಕಂಪ್ಯೂಟರ್ ಲ್ಯಾಬ್ ಅವಶ್ಯಕತೆ ಇರುವುದರಿಂದ, ವಿಶ್ವವಿದ್ಯಾಲಯದ ನೂತನ ಆವರಣದಲ್ಲಿ ಶಾಲಾ ಕಟ್ಟಡ-2 ಮತ್ತು 3 ನ್ನು ನಿರ್ಮಿಸಬೇಕಾಗಿರುವುದು ಅವಶ್ಯವಾಗಿರುತ್ತದೆ.

ಮುಂದುವರೆದು, ಪ್ರತಿ ಅಧ್ಯಯನ ಶಾಲಾ ಕಟ್ಟಡದ ಒಟ್ಟು ವೆಚ್ಚ ರೂ. 10.00 ಕೋಟಿಯೊಳಗಾಗಬಹುದಾಗಿದೆ ಎಂದು ಅಂದಾಜಿಸಲಾಗಿದೆ (ಅಂದಾಜು ಪ್ರತಿ ಅನುಬಂಧ 1 ಮತ್ತು 2 ರಲ್ಲಿ ಲಗತ್ತಿಸಿದೆ.)

ಸದರಿ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿದೆ.

*ನಿರ್ಣಯ*

*ಸದರಿ ವಿಷಯದ ಬಗ್ಗೆ ಮಾತನಾಡುತ್ತ, ಶ್ರೀ. ಎಸ್. ವಿ. ಬುಗಟ್ಟಿ, ಕಾರ್ಯಪಾಲಕ ಅಭಿಯಂತರರು, ಶಾಲಾ ಕಟ್ಟಡ-1 ಕೆಂಭಾವಿ ವಾಸ್ತು ಶಿಲ್ಪಿ ನೀಡಿರುವ ಯೋಜನೆಯಂತೆ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಶಾಲಾ ಕಟ್ಟಡ-2 ಮತ್ತು 3ರ ಯೋಜನೆ ಕೂಡ ಈಗಾಗಲೇ ಸಿದ್ಧಪಡಿಸಲಾಗಿದೆ. ಈ ಕಟ್ಟಡಗಳಿಗೆ ಬೇಕಾಗುವ ಆಯವ್ಯಯ ಅಂದಾಜುಗಳನ್ನು 2022-23ನೇ*

Scanned with CamScanner

ಸಾಲಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು. ಅದರ ವಿವರವನ್ನು ಸಭೆಯ ಮುಂದೆ ಮಂಡಿಸಿದರು. ಈ ಕಟ್ಟಡಗಳ ಶಂಕು ಸ್ಥಾಪನೆಯನ್ನು ಜನವರಿ 2022 ತಿಂಗಳಿನಲ್ಲಿ ಹಮ್ಮಿಕೊಳ್ಳಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

ವಿವರವನ್ನು ಪರಿಶೀಲಿಸಿದ ನಂತರ ಸದರಿ ವಿಷಯವನ್ನು ಅನುಮೋದಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

**ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯ ಚರ್ಚಿಸುವುದು**

ವಿಶ್ವವಿದ್ಯಾಲಯದ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕ್ರೀಡಾ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರು ಶ್ರೀ ಅಬ್ದುಲ್ ಹಕೀಂ ರವರು. ಆವರಣದಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲು ಪೂರ್ವಭಾವಿಯಾಗಿ ಕ್ರೀಡಾ ಮೈದಾನವನ್ನು ಸಮಗೊಳಿಸಲು ಶೀಘ್ರವೇ ಕಾರ್ಯಾರಂಭ ಮಾಡಬೇಕು. ಕ್ರೀಡಾಂಗಣದ ಮೇಲ್ಭಾಗದಲ್ಲಿ ಕ್ರಿಕೇಟ್ ಆಟದ ಪಿಚ್ ಅನ್ನು ಹಾಗೂ ಕೆಳಭಾಗದಲ್ಲಿ ಅಥ್ಲೆಟಿಕ್ಸ್‌ಗೆ ಸಂಬಂಧಿಸಿದ ಆಟಗಳಿಗಾಗಿ ಮೈದಾನವನ್ನು ಸಿದ್ಧಪಡಿಸಲು ಕ್ರೀಡಾ ತಾಂತ್ರಿಕ ಸಲಹಾ ಸಮಿತಿಯಲ್ಲಿ ನಿರ್ಧರಿಸಲಾಯಿತು ಎಂದು ಹೇಳಿದರು ಹಾಗೂ ಈ ಕೆಲಸಗಳನ್ನು ಶೀಘ್ರವೇ ಕಾರ್ಯಾರಂಭ ಮಾಡಬೇಕೆಂದು ಸಭೆ ಮುಂದೆ ಕೋರಿದರು.

ಇದಕ್ಕೆ ಉತ್ತರಿಸುತ್ತ. ಮಾನ್ಯ ಕುಲಪತಿಗಳು ಸಮಿತಿ ನೀಡಿದ ವರದಿಯ ಆಧಾರದ ಮೇಲೆ ಅದಕ್ಕೆ ಬೇಕಾಗುವ ವೆಚ್ಚಗಳಿಗೆ ಆಯವ್ಯಯ ಸಿದ್ಧಪಡಿಸಿ. ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಅಂತಿಮವಾಗಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಹಾಗೂ ಅಧ್ಯಕ್ಷರಿಗೆ ಮಾನ್ಯ ಕುಲಸಚಿವರು ವಂದನಾರ್ಪಣೆ ತಿಳಿಸುತ್ತ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು

ಕುಲಪತಿಗಳು

Scanned with CamScanner